ಚಿಕ್ಕಮಂಗಳೂರಿಂ ಜಿಲ್ಲೆಯಲ್ಲಿರುವ ವಕ್ಫ್ ಆಸ್ತಿಗಳ ವಿವರಗಳು.

೧೫೬೪ ಶ್ರೀ ಸಿ. ಆರ್. ಸೇಗಿರ್ ಅಹಮದ್ (ಚಿಕ್ಕಮಂಗಳೂರು).—ಮಾನ್ಯ ಕೈಗಾರಿಕೆ ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿನ ವಕ್ಫ್ ಪಟ್ಟಿಯಲ್ಲಿ ಸೇರಿರುವ ವಕ್ಫ್ ಸಂಸ್ಥೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ೧೯೮೯–೯೦ನೇ ಸಾಲಿನಲ್ಲಿ ನೀಡಿರುವ ಅನುದಾನ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

(ಅ) ೧೫೫

ತಾಲ್ಲೂಕುವಾರು ಅಂಕಿಗಳು

೧.	ಚಿಕ್ಕಮಗಳೂರು	೪೮
೨.	ಮೂಡಿಗೆರೆ	೧೫
೩.	ಕೊಪ್ಪ	೧೧
೪.	ಎನ್. ಆರ್. ಪುರ	೧೭
೫.	ತರೀಕೆರೆ	೬೦
೬.	ಕಡೂರು	೩
೭.	ಶೃಂಗೇರಿ	೧
	ಒಟ್ಟು	೧೫೫

ಆ) ರೂ. ೨೦,೦೦೦–೦೦

(ಸಂಗೀನ ಜಾವಿಯಾ ಮಸ್ಜಿದ್, ಚಿಕ್ಕಮಗಳೂರು)

೧. ಚಿಕ್ಕಮಗಳೂರು ತಾಲ್ಲೂಕು ರೂ. ೨೦,೦೦೦–೦೦

ಬೇತಮಂಗಲದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಯಂನ್ನು ತೆರೆಯುವ ಬಗ್ಗೆ,

೧೪೩೪. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಬೇತಮಂಗಲದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಯಂನ್ನು ತೆರೆಯಲಾಗಿದೆಯೇ

(ಆ) ಇಲ್ಲದಿದ್ದರೆ ಕಾರಣಗಳೇನು

(ಇ) ಅಧಿಕ ಸಂಖ್ಯೆಯಲ್ಲಿ ರೇಷ್ಮೆ ಬೆಳೆಗಾರರು ಇರುವುದರಿಂದ ಅವರುಗಳ ಅನುಕೂಲಕ್ಕಾಗಿ ಬೇತಮಂಗಲದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ

(ಈ) ಇಲ್ಲಿ ಮಾರುಕಟ್ಟೆಯನ್ನು ತೆರೆಯಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿದೆಯೇ ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

(ಅ) ಇಲ್ಲ

(ಆ) ಬೇತಮಂಗಲದಲ್ಲಿ ನೂಲಂ ಬಿಚ್ಚುವ ಘಟಕಗಳು ಮತ್ತು ನೂಲು ಬಿಚ್ಚುವವರಂ ಇರುವುದಿಲ್ಲ. ಹಶ್ತಿರದ ಕೋಲಾರದಲ್ಲಿ ಒಂದು ಸುವ್ಯವಸ್ಥಿತ ಮಾರುಕಟ್ಟೆ ಹಾಗೂ ಮುಳಬಾಗಿಲಿನಲ್ಲಿ ಒಂದು ಮಾರುಕಟ್ಟೆ ಇದೆ.

(ಇ) ಸದ್ಯದಲ್ಲಿ ಇಲ್ಲ.

(ಈ) ಬಂದಿದೆ.